| ತಹಶೀಲದಾರರ ಕರ್ತವ್ಯಗಳು | | | |
|---|---|---|---|
| ಅ.ನಂ | ಕಾಯ್ದೆ | ಕಲಂ | ವಿವರ |
| 29 | Karnataka Legal Aid (District and taluka Committees) Scheme 1983. | ನಿಯಮ 5 | ತಹಶೀಲದಾರರು ತಾಲೂಕಾ ಕಾನೂನು ನೆರವು ಕಮೀಟಿಯ ಒಬ್ಬ ಸದಸ್ಯರಾಗಿದ್ದಾರೆ. |
| 30 | The Karnataka Public Premises (Eviction of unauthorized Occupants) Rules 1980 | ನಿಯಮ 9 | ತಹಶೀಲದಾರರ ಮೇಲ್ವಿಚಾರಣೆಯಲ್ಲಿರುವ ಸರಕಾರದ ಮಜರಾಯಿ/ಧಾರ್ಮಿಕ ದತ್ತಿ ಸಂಘ/ಸಂಸ್ಥೆಗಳ ಬಗ್ಗೆ ಕಲಂ 13ರ ಅಡಿಯಲ್ಲಿ ತಹಶೀಲದಾರರು ನಿರ್ಧಿಷ್ಠ ಅಧಿಕಾರಿ ಆಗಿದ್ದು ಅನಧಿಕೃತ ಅತಿಕ್ರಮಣ ತೆರವುಗೊಳಿಸುವ ಅಧಿಕಾರ ಹೊಂದಿದ್ದಾರೆ. |
| 31 | The Karnataka Scheduled Caste, Scheduled Tribe and other backward classed (Reservation of Appointments, etc) Rules 1992. | ನಿಯಮ–3 A | ಈ ನಿಯಮದ ಅಡಿಯಲ್ಲಿ, ತಹಶೀಲದಾರರು ಜಾತಿಪ್ರಮಾಣ ಪತ್ರ ನೀಡಲು ಅಧಿಕಾರ ಹೊಂದಿರುತ್ತಾರೆ. |
| 32 | The Karnataka State Aid to Industrial Rules-1961 | ನಿಯಮ–3 ಟಿಪ್ಪಣೆ–2 | ಸಾಲ ಮಂಜೂರಿ ಪ್ರಾಧಿಕಾರದ ವೈಯಕ್ತಿಕ ಜಾಮೀನಿನ ಮೇರೆಗೆ ಸಾಲ ಮಂಜೂರ ಮಾಡುವ ಪೂರ್ವದಲ್ಲಿ ತಹಶೀಲದಾರರು ನೀಡಿದ ಸಾಲ ಮರುಪಾವತಿ ಶಕ್ತಿ (Solvency Certificate) ಪ್ರಮಾಣ ಪತ್ರ ಹಾಜರ ಪಡಿಸಬೇಕು. |
| 33 | The Karnataka Cattle Tress Pass Act 1966 | ಕಲಂ–14 | ಸರಕಾರದ ಅಧಿಸೂಚನೆ ಹೊರಡಿಸಿ ನಿರ್ಧಿಷ್ಠ ಕ್ಷೇತ್ರಕ್ಕೆ ಈ ಕಲಂ ಅನ್ವಯಿಸಿದಲ್ಲಿ ತಹಶೀಲದಾರರು ಸದ್ರಿ ಕ್ಷೇತ್ರದ ಜಾನಾವಾರಗಳನ್ನು ಅಲ್ಲಿಂದ ಅಧಿಸೂಚನೆಯಲ್ಲಿ ನಮೂದಿಸಿದ ಸ್ಥಳಕ್ಕೆ ಸಾಗಿಸಲು ಜಾನಾವಾರುಗಳ ಮಾಲಿಕರಿಗೆ ನಿರ್ದೇಶಿಸಲು ಅಧಿಕಾರ ಹೊಂದಿರುತ್ತಾರೆ. |
| 34 | Karnataka Public Health Act 1944. | ಕಲಂ 47 | ಯಾವುದೇ ಮನೆ/ಕಟ್ಟಡ ವಾಸಕ್ಕೂ ಸೂಕ್ತ ಅಲ್ಲ ಆರೋಗ್ಯ ಅಧಿಕಾರಿ ಪರಿಗಣಿಸಿದಲ್ಲಿ ಅಲ್ಲಿ ವಾಸ ಪ್ರತಿಬಂಧಿಸಿ ಆದೇಶ ಹೊರಡಿಸಲು ಕಾರ್ಯನಿರ್ವಾಹಕ ದಂಡಾಧಿಕಾರಿ ಇವರಿಗೆ ಮನವಿ ಮಾಡಬಹುದು. ಅವರು ಈ ಬಗ್ಗೆ ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸುವ ಅಧಿಕಾರ ಹೊಂದಿದ್ದಾರೆ. |
| | | ಕಲಂ 68 | ಸಾಂಕ್ರಾಮಿಕ ರೋಗ ಇತ್ಯಾದಿಗಳಿಂದಾಗಿ ಸಾರ್ವಜನಿಕ ಹಿತಾಸಕ್ತಿಗಳಿಂದಾಗಿ ಆರೋಗ್ಯ ಅಧಿಕಾರಿ ಯಾವುದೇ ವಸತಿ ಗೃಹ/ಉಪಹಾರ ಗೃಹ ಮುಚ್ಚುವ ಅಗತ್ಯತೆ ಕಂಡು ಬಂದಲ್ಲಿ, ಕಾರ್ಯನಿರ್ವಾಹಕ ದಂಡಾಧಿಕಾರಿಯವರಿಗೆ ಈ ಬಗ್ಗೆ ಮನವಿ ಸಲ್ಲಿಸಬಹುದು ಹಾಗೂ ಕಾರ್ಯನಿರ್ವಾಹಕ ದಂಡಾಧಿಕಾರಿ ಈ ಬಗ್ಗೆ ಪರಿಶೀಲಿಸಿ ಆದೇಶ ಮಾಡುವ ಅಧಿಕಾರ ಹೊಂದಿರುತ್ತಾರೆ. |
| 35 | ಸಾಲ ತೀರಿಸುವ ಶಕ್ತಿ (Solvency ) ದೃಢೀಕರಣ ಪ್ರಮಾಣ ಪತ್ರ | ಸರಕಾರದ ಆದೇಶ ಕ್ರ RD/14/ELR /85 Dt. 23-9-94 | ತಹಶೀಲದಾರರು ರೂ. 1.00 ಲಕ್ಷದವರೆಗೆ ಸಾಲ ತೀರಿಸುವ ಶಕ್ತಿ ಪ್ರಮಾಣ ಪತ್ರ ನೀಡುವ ಅಧಿಕಾರ ಹೊಂದಿದ್ದಾರೆ. |

| ಅ.ನಂ | ಕಾಯ್ದೆ | ಕಲಂ | ವಿವರ |
|---|---|---|---|
| 36 | ರೈತರ ಆತ್ಮಹತ್ಯೆ ಪ್ರಕರಣಗಳ ಪರಿಶೀಲನೆ | ಸರಕಾರದ ಆದೇಶ ಕ್ರ. ಕೃತೋಇ/ 280/ಉಇ 2003 ದಿನಾಂಕ 18–7–03 | ಇಂತಹ ಪ್ರಕರಣಗಳ ಪರಿಶೀಲನೆ ಹಾಗೂ ಜಿಲ್ಲಾಧಿಕಾರಿಯವರ ಪ್ರಸ್ತಾವನೆ ಸಲ್ಲಿಸುವ ಬಗೆಗಿನ ತಾಲೂಕಾ ಸಮಿತಿಗೆ ತಹಶೀಲದಾರರು ಸದಸ್ಯರಾಗಿದ್ದಾರೆ. |
| 37 | ಗ್ರಾಮೀಣ ಆಶ್ರಯ ಯೋಜನೆ ಅನುಷ್ಠಾನ | ಸರಕಾರದ ಆದೇಶ ಕ್ರ.ವ ಇ/42/ಎಚಎ ಎಂ/99 ದಿನಾಂಕ 10–5–2000 | ತಾಲೂಕಾ ಕಮೀಟಿಗೆ ತಹಶೀಲದಾರರು ಒಬ್ಬ ಸದಸ್ಯರಾಗಿದ್ದಾರೆ. |
| 38 | Representation of the People Act 1950 | ಕಲಂ 13–C | ಈ ಕಲಂ ಅಡಿಯಲ್ಲಿ ತಾಲೂಕಿಗೆ ಸಂಬಂಧಿಸಿದಂತೆ ತಹಶೀಲದಾರರನ್ನು ಸಾಮಾನ್ಯವಾಗಿ ಸಹಾಯಕ ಮತದಾರ ನೊಂದಣಿ ಅಧಿಕಾರಿ ಅಂತಾ ನೇಮಕಾತಿ ಮಾಡಲಾಗುತ್ತದೆ. |
| | | ಕಲಂ 22 | ಈ ಕಲಂ ಅಡಿಯಲ್ಲಿ ತಹಶೀಲದಾರರನ್ನು ಸಾಮಾನ್ಯವಾಗಿ ವಿಧಾನಸಭಾ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಹಾಯಕ ಚುನಾವಣಾ ಅಧಿಕಾರಿ ಅಂತಾ ನೇಮಕಾತಿ ಮಾಡಲಾಗುತ್ತದೆ. |
| 39 | ಕರ್ನಾಟಕ ಅರಣ್ಯ ನಿಯಮಾವಳಿ 1969 | ನಿಯಮ 22 (1) | ಅರಣ್ಯ ವ್ಯವಸ್ಥೆ ಬಗ್ಗೆ ಪಂಚಾಯತಿ ಪ್ರತಿ ತಿಂಗಳು ಸಭೆ ಜರುಗಿಸಿ ಸಭೆಯ ನಡುವಳಿಕೆ ಪ್ರತಿಯನ್ನು ತಹಶೀಲದಾರ ಹಾಗೂ ಇತರೆ ಅಧಿಕಾರಿಗೆ ಕಳಿಸುವುದು. |
| | " | ನಿಯಮ 22 (2) | ಪಂಚಾಯತ ಠರಾವು ಸಮುದಾಯದ ಹಿತಾಸಕ್ತಿಗೆ ವ್ಯತಿರಿಕ್ತಬಗ್ಗೆ ಅಥವಾ ಕಾನೂನು ಬಾಹಿರ ಅಂತ ಲಿಖಿತವಾಗಿ ಕಾರಣ ತೋರಿಸಿದಲ್ಲಿ ತಹಶೀಲ ದಾರರು ಠರಾವು ರದ್ದು ಪಡಿಸಲು ಅಧಿಕಾರ ಹೊಂದಿದ್ದಾರೆ. ಸದ್ರಿ ಆಡಳಿತ ವಿರುದ್ದ ಜಿಲ್ಲಾಧಿಕಾರಿಯವರಿಗೆ ಮೇಲ್ಮನವಿ ಸಲ್ಲಿಸಬಹುದಾಗಿದೆ. |
| | " | ನಿಯಮ 22 (3) | ಪಂಚಾಯಿತ ಲೆಕ್ಕ ಪತ್ರ ಸರಿಯಾಗಿ ನಿರ್ವಹಿಸುವುದು ಹಾಗೂ ಜಿಲ್ಲಾಧಿಕಾರಿಯವರು ನಿಗದಿ ಪಡಿಸಿದ ನಮೂನೆಯಲ್ಲಿ ಮಾಹಿತಿಯನ್ನು ಜಿಲ್ಲಾಧಿಕಾರಿಯವರ ಸೂಚನೆ ಪ್ರಕಾರ ಅದನ್ನು ತಹಶೀಲದಾರರಿಗೆ ಕಳಿಸುವುದು. ತಹಶೀಲದಾರರ ಸೂಚನೆ ಪ್ರಕಾರ ಲೆಕ್ಕ ಪತ್ರ ಪ್ರತಿ ವರ್ಷಕ್ಕೂ ಒಮ್ಮೆ ತಪಾಸಣೆ ಕೈಗೊಳ್ಳುವುದು. |
| | | ನಿಯಮ 22 (15) | ತಹಶೀಲದಾರರ ಪೂರ್ವಾನುಮತಿಯೊಂದಿಗೆ ಪಂಚಾಯಿತಿಯ ಯಾವುದೇ ಅವಧಿಗೆ ಅರಣ್ಯ ಪ್ರದೇಶದ ಯಾವುದೇ ಭಾಗವನ್ನು ಯಾವುದೇ ತರದ ಉಪಯೋಗಕ್ಕೆ ನಿರ್ಭಂದಿಸಬಹುದಾಗಿದೆ. ಅದರಂತೆ ದನಕರುಗಳನ್ನು ಸಹ ನಿರ್ಭಂದಿಸಬಹುದಾಗಿದೆ. |

| ಅ.ನಂ | ಕಾಯ್ದೆ | ಕಲಂ | ವಿವರ |
|---|---|---|---|
| | " | ನಿಯಮ 22 (23) | ತಹಶೀಲದಾರ ಹಾಗೂ ಸ್ಥಳೀಯ ಅರಣ್ಯ ಸಂರಕ್ಷಣಾಧಿಕಾರಿ ಇವರು ಜಂಟಿಯಾಗಿ ಪ್ರತಿ 6 ತಿಂಗಳಿಗೊಮ್ಮೆ ಗ್ರಾಮದ ಅರಣ್ಯ ತಪಾಸಣೆ ಕೈಗೊಂಡು ಲೆಕ್ಕಪತ್ರ ಪರಿಶೀಲಿಸಿ ಪರಿಶೀಲನಾ ವರದಿಯನ್ನು ಜಿಲ್ಲಾಧಿಕಾರಿ ಹಾಗೂ ಇತರೆ ಅಧಿಕಾರಿಗಳಿಗೆ ಸಲ್ಲಿಸಬೇಕಾಗುತ್ತದೆ. |
| | " | ನಿಯಮ 98(5) | ದೇವಸ್ಥಾನ ಹಾಗೂ ಮುಜುರಾಯಿ ಸಂಸ್ಥೆಗಳ ಅರಣ್ಯ ಇಲಾಖೆಗಳಿಂದ ಪಡೆಯಲಾದ ಗಂಧದ ಕಟ್ಟಿಗೆ ಬಗ್ಗೆ ಲೆಕ್ಕ ಪತ್ರ ಸರಿಯಾಗಿ ಇಡುವದು . ಇದನ್ನು ಕಂದಾಯ ಇಲಾಖೆಯ ಕಂದಾಯ ನಿರೀಕ್ಷಕರು ಹಾಗೂ ಅವರ ಮೇಲ್ಪಟ್ಟ ಅಧಿಕಾರಿ ಹಾಗು ಅರಣ್ಯ ಇಲಾಖೆಯ ಅಧಿಕಾರಿ ಅದನ್ನು ತಪಾಸಣೆ ಮಾಡಬಹುದಾಗಿದೆ. |
| | " | ನಿಯಮ 104 (1) | ಗಂಧದ ಮರ ಇರುವ ಜಮೀನಿನ ಯಾವತ್ತು ಖಾಸಗಿ ಜಮೀನಿನ ಮಾಲಕರು ತಮ್ಮ ಜಮೀನಿನ ಮಾಲಿಕತ್ವದ ಬಗ್ಗೆ ತಹಶೀಲದಾರರಿಂದ ಪ್ರಮಾಣ ಪತ್ರ ಪಡೆದು, ಅದರೊಂದಿಗೆ ನಮೂನೆ 12 ರಲ್ಲಿ ಮಾಹಿತಿಯನ್ನು ವಿಭಾಗೀಯ ಅರಣ್ಯಧಿಕಾರಿಯವರಿಗೆ ಅಥವಾ ಅವರಿಂದ ಅಧಿಕಾರ ಪ್ರಯೋಜಿಸಿದವರಿಗೆ ನಿಗದಿತ ಅವಧಿಯಲ್ಲಿ ಸಲ್ಲಿಸಬೇಕಾಗುತ್ತದೆ. |
| | " | ನಿಯಮ 105(1) | ವಿಭಾಗೀಯ ಅರಣ್ಯಧಿಕಾರಿಯವರು ಈ ರೀತಿ ಸಲ್ಲಿಸಲಾದ ಘೋಷಣೆಗಳನ್ನು ಪರಿಶೀಲನೆ ಮಾಡುವಲ್ಲಿ ಅಗತ್ಯತೆ ಅನುಸಾರ ಕಂದಾಯ ಅಧಿಕಾರಿಗಳ ಸಲಹೆ ಪಡೆದು ಗಂಧದ ಗಿಡಗಳಿಗೆ ಕ್ರಮ ಸಂಖ್ಯೆ ನೀಡುವುದು. |
| | " | ನಿಯಮ 105(2) | ಘೋಷಣೆಯ ದ್ವಿತೀಯ ಪ್ರತಿಯನ್ನು ಸಂಬಂಧಿಸಿದ ತಹಶೀಲದಾರನಿಗೆ ಕಳಿಸುವುದು. |
| | " | ನಿಯಮ 105(3) | ಘೋಷಣೆ ಪ್ರಕಾರ ಗಂಧದ ಗಿಡದ ಬಗ್ಗೆ ಸಂಬಂಧಿಸಿದ ಗ್ರಾಮ ದಾಖಲೆಯಲ್ಲಿ ಈ ಬಗ್ಗೆ ನೊಂದ ಇಡುವುದು. |
| | " | ನಿಯಮ 115 | ಜಮೀನಿನಿಂದ ಗಂಧದ ಮರ ತೆಗೆದಾಗ ಅದನ್ನು ತಹಶೀಲದಾರರಿಗೆ ತಿಳಿಸಬೇಕು. |
| | " | ನಿಯಮ 116 | ಸರಕಾರಿ ಜಮೀನಲ್ಲಿಯೇ ಗಂಧದ ಮರ ಕಳವು/ಹಾಳಾದ ಸಂದರ್ಭದಲ್ಲಿ ಸದ್ರಿ ಬಗ್ಗೆ ಕಂದಾಯ ಇಲಾಖೆ ಅದನ್ನು ವಿಭಾಗೀಯ ಅರಣ್ಯಧಿಕಾರಿಗೆ ತಿಳಿಸುವುದು. |
| **39** | The Explosives Act 1983 | | ದುರ್ಘಟನೆಗಳು ಜರುಗಿದಾಗ ಜಿಲ್ಲಾದಂಡಾಧಿಕಾರಿಯವರು ಈ ಬಗ್ಗೆ ಚೌಕಶಿ ಕೈಗೊಳ್ಳಲು ಅಧಿಕಾರ ಹೊಂದಿದ್ದು ಜಿಲ್ಲಾ ದಂಡಾಧಿಕಾರಿ ತನ್ನ ಅಧೀನ ದಂಡಾಧಿಕಾರಿಯವರಿಗೆ ಈ ಚೌಕಶಿ ಕೈಗೊಳ್ಳಲು ನಿರ್ದೇಸಿಸ ಬಹುದಾಗಿದೆ. |
| **40** | The Explosives Rules 1983 | | ಜಿಲ್ಲಾ ದಂಡಾಧಿಕಾರಿಯವರ ಅಧೀನ ಕಾರ್ಯನಿರ್ವಾಹಕ ದಂಡಾಧಿಕಾರಿಯವರು ತಮ್ಮ ಕಾರ್ಯಕ್ಷೇತ್ರದಲ್ಲಿ ತಪಾಸಣೆ ಹಾಗೂ ಜಪ್ತಿ ಕೈಗೊಳ್ಳುವ ಅಧಿಕಾರ ಹೊಂದಿದ್ದಾರೆ. |

| ಅ.ನಂ | ಕಾಯ್ದೆ | ಕಲಂ | ವಿವರ |
|---|---|---|---|
| 41 | The Bounded Labour System (Abolition) Act 1976 | ಕಲಂ–11 | ಜಿಲ್ಲಾ ದಂಡಾಧಿಕಾರಿಯವರು ಈ ಕಾಯ್ದೆ ಅಡಿಯಲ್ಲಿಯ ತಮ್ಮ ಅಧಿಕಾರವನ್ನು ತನ್ನ ಅಧೀನ ದಂಡಾಧಿಕಾರಿಯವರಿಗೆ ಪ್ರತ್ಯೋಜಿಸ ಬಹುದಾಗಿದೆ. ಈ ರೀತಿ ಅಧಿಕಾರ ಪ್ರತೋಜಿರಿದಾಗ ತಾಲೂಕಾ ದಂಡಾಧಿಕಾರಿ ತನ್ನ ಕಾರ್ಯಕ್ಷೇತ್ರದಲ್ಲಿ ಅಧಿಕಾರ ಚಲಾಯಿಸಬಹುದಾಗಿದೆ. |
| | " | ಕಲಂ–12 | ಈ ರೀತಿ ತಾಲೂಕಾ ಕಾರ್ಯನಿರ್ವಾಹಕ ದಂಡಾಧಿಕಾರಿಯವರಿಗೆ ಅಧಿಕಾರ ಪ್ರತೋಜಿಸಿದಾಗ, ತನ್ನ ಕ್ಷೇತ್ರದಲ್ಲಿ ಜೀತದಾಳು ಪದ್ಧತಿ ನಿರ್ಮೂಲನೆಗೆ ಕಾಯ್ದೆ ಅಡಿಯಲ್ಲಿ ಕ್ರಮ ಜರುಗಿಸಬೇಕಾಗುತ್ತದೆ. |
| 42 | The Karnataka Village Office Abolition Act -1961. | Govt. Notification No. RD-415-MVS-79 dated : 29-8-79 | ಈ ಕಾಯ್ದೆ ಅಡಿಯಲ್ಲಿ ಜಿಲ್ಲಾಧಿಕಾರಿಯವರ ಅಧಿಕಾರ ಹಾಗೂ ಕರ್ತವ್ಯಗಳನ್ನು ತಹಶೀಲದಾರರಿಗೆ ಪ್ರತ್ಯೋಜಿಸಲಾಗಿದೆ. |
| 43 | The Karnataka Non-Agricultural (Land) Rules-1963. | ನಿಯಮ 5 | ಸಾಲ ಮಂಜೂರಾತಿಗೆ ಅರ್ಜಿಯನ್ನು ತಹಶೀಲದಾರರಿಗೆ ಸಲ್ಲಿಸ ಬೇಕಾಗುತ್ತದೆ. |
| | " | | ತಹಶೀಲದಾರರು ರೂ.200/– ರವರೆಗೆ ಸಾಲ ಮಂಜೂರ ಮಾಡುವ ಅಧಿಕಾರ ಹೊಂದಿರುತ್ತಾರೆ. |
| 44 | ಭಾರತೀಯ ಸಾಕ್ಷಿ ಅಧಿನಿಯಮ 1872 | ಕಲಂ 9 | ಅಪರಾಧಿಯನ್ನು ಗುರ್ತಿಸುವ ಪ್ರಕ್ರಿಯ (Identification Parade) ನಡೆಸುವದು. |
| | | ಕಲಂ 32 | ಮರಣೋನ್ಮುಖ ಹೇಳಿಕೆ (Dying Declaration) ಪಡೆಯುವುದು. |
| 45 | Karnataka Excise Act, 1965 | ಕಲಂ 7 ಅಧಿಸೂಚನೆ (HD 260 EDC-67 ದಿನಾಂಕ 23–12–67 | ಜಿಲ್ಲಾಧಿಕಾರಿಯವರಲ್ಲಿ ನಿಹಿತವಾದ ಅಧಿಕಾರವನ್ನು ತಹಶೀಲದಾರರಿಗೆ ಪ್ರತ್ಯೋಜಿಸಬಹುದಾಗಿದೆ. |
| | " | ಕಲಂ 52 ಅಧಿಸೂಚನೆ ಕ್ರ HD 64 PES 70 ದಿನಾಂಕ 24–05–71 | ವಾರಂಟ ಹೊರಡಿಸದೇ ವ್ಯಕ್ತಿಯನ್ನು ದಸ್ತಗೀರ ಮಾಡಿ ಮುಟ್ಟುಗೋಲು ಹಾಕಬಹುದಾದ ವಸ್ತುಗಳನ್ನು ಜಪ್ತ ಮಾಡಲು ಹಾಗು ಶೋಧಿಸಬಹುದಾಗಿದೆ. |

**Sec:32(I)** Dying declaration given before Magistrate when no Doctor was consulted to find out declarant"s state of mind and when declaration is not in question-answer form not in words and language of declarant, such dying declaration cannot be relied upon(Surinder Kumar Vs. State l992-Cr.L.J.616(Del.)

**(2)**Magistrate recording statement from the victim under expectation of death .The victim does not die. The statement cannot be used as sustentative evidence.(G.Vijayavardhan Rao Vs. State of A.P. AIR.l996 SC-2791)

**(3)** Dying declaration made to a Police Officer can be relied upon, if it inspires confidence (State Vs.Digambar 1989(3)Crimes-3l5(Bom.)

| 23 (B) | |
|---|---|
| **ತಹಶೀಲದಾರರು ಈ ಕೆಳಗಿನ ಇತರೆ ಕಾರ್ಯಗಳನ್ನು ಸಹ ನಿರ್ವಹಿಸಬೇಕಾಗುತ್ತದೆ.** | |
| 1 | ತಹಶೀಲದಾರರು ತನ್ನ ತಾಲೂಕಿನ ಗ್ರಾ.ಲೆ. ಕಂ.ನೀ ಉಪತಹಶೀಲದಾರರು ಹಾಗು ತನ್ನ ಕಾರ್ಯಾಲಯದ ಸಿಬ್ಬಂದಿ ತಮ್ಮ ಕರ್ತವ್ಯಗಳನ್ನು ಸುಸೂತ್ರವಾಗಿ ಮತ್ತು ದಕ್ಷತೆಯಿಂದ ನೆರವೇರಿಸುವಂತೆ ನೋಡಿಕೊಳ್ಳುವುದು. |
| 2 | ಕಾರ್ಯನಿರ್ವಾಹಕ ದಂಡಾಧಿಕಾರಿಯಾಗಿ ಕಾಲ–ಕಾಲಕ್ಕೆ ಶಾಂತತಾ ಸಭೆ ಕರೆದು ತಾಲೂಕಿನಲ್ಲಿ ಸುವ್ಯವಸ್ಥೆ ಕಾಪಾಡಿಕೊಳ್ಳುವುದು. |
| 3 | ಅತೀವೃಷ್ಠಿ/ಅನಾವೃಷ್ಠಿಯಲ್ಲಿ ನೊಂದ ಕುಟುಂಬಗಳಿಗೆ ಸ್ವಾಂತನ ಹಾಗು ಪರಿಹಾರ ಧನ ಹಂಚಿಕೆ ಮಾಡುವದು. |
| 4 | ರಾಷ್ಟ್ರೀಯ ಹಾಗೂ ಸ್ಥಳೀಯ ದಿನಾಚರಣೆಗಳನ್ನು ಆಚರಿಸುವುದು. |
| 5 | ಬರಗಾಲ ಕಾಮಗಾರಿ ಮೇಲೆ ಉಸ್ತುವಾರಿ ವಹಿಸುವುದು ಮತ್ತು ಕುಡಿಯುವ ನೀರು ಸರಬರಾಜು ಮಾಡುವದು. |
| 6 | ಬೆಳೆ ವಿಮಾ ಯೋಜನೆ ಅಡಿಯಲ್ಲಿ ಕೆಲಸ ನಿರ್ವಹಿಸುವುದು. |
| 7 | ಅಧೀನ ಸಿಬ್ಬಂದಿಗಳ ವೇತನ, ರಜೆ, ವಗೈರೆ ಸೇವಾ ಸೌಲಭ್ಯಗಳ ನಿರ್ವಹಣೆ. |
| 8 | ವಿವಿಧ ಕಾನೂನುಗಳ ಅಡಿಯಲ್ಲಿ ನ್ಯಾಯಾಲಯ ಪ್ರಕರಣಗಳನ್ನು ನಡೆಸುವುದು. |
| 9 | ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸಮನ್ವಯಗೊಳಿಸಿ ತಾಲೂಕಿನ ಆಡಳಿತ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುವುದು. |
| 10 | ತಾಲೂಕಿಗೆ ಬಂದ ಗಣ್ಯ ವ್ಯಕ್ತಿಗಳ/ ಅಧಿಕಾರಿಗಳಿಗೆ ಶಿಷ್ಟಾಚಾರದ ವ್ಯವಸ್ಥೆ ಮಾಡುವುದು. |
| 11 | ಸಾರ್ವಜನಿಕ ಕುಂದು ಕೊರತೆ ತಿಳಿದುಕೊಂಡು ಅವುಗಳ ಪರಿಹಾರ ಕ್ರಮ ಜರುಗಿಸುವುದು. |
| 12 | ಪಡಿತರ ಚೀಟಿ ವಿತರಣೆ ಹಾಗೂ ಪಡಿತರ ಸಾಮಗ್ರಿ ಸಮರ್ಪಕ ವಿತರಣೆ ಆಗುವಂತೆ ನೋಡಿಕೊಳ್ಳುವುದು. |
| 13 | ಲೋಕಸಭೆ, ವಿಧಾನಸಭೆ, ಮುನ್ಸಿಪಾಲಟಿ, ಪಂಚಾಯಿತಿ ಇತ್ಯಾದಿ ಸದಸ್ಯರ ಚುನಾವಣೆ ನಿರ್ವಹಿಸುವದು. |
| 14 | ರೆಡಕ್ರಾಸ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿಗದಿ ಪಡಿಸಲಾದ ಯೋಜನೆಗಳ ಅನುಷ್ಠಾನಕ್ಕೆ ಕ್ರಮ ಜರುಗಿಸುವುದು. |
| 15 | ಹಕ್ಕು ದಾಖಲೆ ಕುರಿತಂತೆ “ಭೂಮಿ” ಕಾರ್ಯಚರಣೆ ಸಮರ್ಪಕವಾಗಿ ಜರಗುವಂತೆ ನೋಡಿಕೊಳ್ಳುವುದು. |
| 16 | ರಹವಾಸಿ, ಕುಟುಂಬದ ಉತ್ತರ ಜೀವಿತರು, ಕೃಷಿ ಕೂಲಿ ಇತ್ಯಾದಿ ಪ್ರಮಾಣ ಪತ್ರ ನೀಡುವುದು. |
| 17 | ಸಾಕ್ಷರತಾ ಅಂದೋಲನದ ಸಮರ್ಪಕ ಅನುಷ್ಠಾನ |